

ನೋಡಿದೋರು ಏನ್ ಅನ್ಕೊಂಡು ಬಿಡ್ತಾರೆ ಅನ್ನೋ ಭಯದಲ್ಲೇ ನಮ್ಮ ಎಷ್ಟೋ ಬೇಕುಗಳನ್ನು ಬಿಡ್ತೀವಿ. ಎಷ್ಟೋ ಬೇಡಗಳನ್ನು ಮಾಡ್ತೀವಿ. ಈ ಭಯವನ್ನು ಬಿಟ್ಟು ಬದುಕಿದ್ರೆ, ನಮ್ಮ ಬದುಕು ಹೇಗಿರುತ್ತೆ?

■ **ಅನಿತಾ ನಾಡಿಗ್**
ಮೈಂಡ್ ಕೋಚ್ ಮತ್ತು ಕೌನ್ಸೆಲರ್



# ನೋಡಿದೋರು ಏನಂತಾರೆ?

ನೋಡಿದೋರೇನಂತಾರೆ? ಈ ಪ್ರಶ್ನೆ ನನ್ನಂತೆ ನಿಮ್ಮನ್ನೂ ಸುಮಾರು ಸಲ ಕಾಡಿರಬಹುದಲ್ಲ? ಕೆಲವರ ಜೀವನದ ದಿಕ್ಕನ್ನೇ ಬದಲಾಯಿಸೋ ಶಕ್ತಿ ಈ ಪ್ರಶ್ನೆಗಿದೆ ಅಂತ ಅನ್ನಿಸುತ್ತೆ.

ಸ್ವಲ್ಪ ಹಳೆಯ ಕಾಲದ ಅಮ್ಮನೋ ಅಜ್ಜಿಯೋ ಆಧುನಿಕ ಮಗಳಿಗೆ 'ಕುಂಕುಮ ಇಟ್ಕೋ', 'ಬಳೆ ಯಾಕೆ ಹಾಕ್ಕೊಂಡಿಲ್ಲ?', 'ತಲೆ ಹಂಗೆಲ್ಲಾ ಬಿರಿ ಹುಯ್ಕೋಬಾರದು' (ಕೂದಲು ಬಿಟ್ಕೊಂಡು ಇರಬಾರದು) ಅಂತ ತಮ್ಮ ನಂಬಿಕೆಗಳನ್ನು ಮಗಳ ಮೇಲೆ ಹೇರುವುದನ್ನು ನಾವು ನೋಡಿರುತ್ತೇವೆ ಅಥವಾ ಅನುಭವಿಸಿರುತ್ತೇವೆ.

ಆಧುನಿಕ ಕಾಲದ ಹೆಣ್ಣುಮಕ್ಕಳೇನು – ಅಮ್ಮ ಹೇಳಿದರು ಅಂತ ಎಲ್ಲವನ್ನೂ ಕೇಳುತ್ತಾರಾ? ಇಲ್ಲ. ಅಮ್ಮನಿಗೆ ಪ್ರಶ್ನೆಗಳು ಎದುರಾಗುತ್ತವೆ? ಯಾಕೆ ಮಾಡಬೇಕು? ಮಾಡದಿದ್ರೆ ಏನಾಗತ್ತೆ? ಮಾಡೋದ್ರಿಂದ ಏನು ಪ್ರಯೋಜನ? ಇಂಥ ಪ್ರಶ್ನೆಗಳಿಗೆ ಅಮ್ಮನ ಹತ್ರ ಉತ್ತರ ಇಲ್ಲದಿರಬಹುದು. ಹಿಂದೆ ಆಗಿದ್ರೆ 'ಎದುರು ಮಾತಾಡ್ತೀಯಾ?' ಅಂತ ಎರಡು ಬಿಟ್ಟಿರೋರು. ಈಗ ಹಾಗೆ ಮಾಡುವುದಕ್ಕೆ ಆಗಲ್ಲ. ಅಮ್ಮನಿಗೂ ಅದನ್ನ ಮಾಡಲೇಬೇಕು ಅನ್ನೋ ನಿರೀಕ್ಷೆ ಇಲ್ಲದೇ ಇರಬಹುದು. ಆದರೆ 'ನೋಡಿದೋರು ಏನು ಅಂದ್ಕೋತಾರೆ' ಅನ್ನೋ ಭಯ ಇರಬಹುದು. ಈ ಭಯ, ಅಮ್ಮ–ಮಗಳ ಮಧ್ಯೆ ಜಗಳ ತರಬಹುದು. ಮನಸ್ತಾಪ ತರಬಹುದು. ಅವರಿಬ್ಬರ ಸಂಬಂಧದಲ್ಲಿ ಬಿರುಕು ಮೂಡಿಸಬಹುದು.

ಅಪ್ಪನ ಸ್ನೇಹಿತರ ಮಕ್ಕಳೆಲ್ಲ ಡಾಕ್ಟರ್, ಎಂಜಿನಿಯರ್ ಆಗಿರ್ತಾರೆ. ಮಗನಿಗೆ ಆರ್ಟಿಸ್ಟ್ ಆಗೋ ಬಯಕೆ. ಅಪ್ಪನಿಗೆ ಒಂದೆಡೆ ಆರ್ಟಿಸ್ಟ್ ಆಗಿ ಹೊಟ್ಟೆ ತುಂಬಿಸಿಕೊಳ್ಳಬಹುದು ಅನ್ನೋ ಭಯ. ಇನ್ನೊಂದೆಡೆ ಸ್ನೇಹಿತರು ಏನು ಅನ್ಕೋತಾರೆ? ಇವರ ಮಗನಿಗೆ ಬುದ್ಧಿವಂತಿಕೆ ಕಡಿಮೆ ಅಂದ್ಕೊಂಡರೆ? ಅಥವಾ ಮಗನ ಭವಿಷ್ಯದ ಬಗ್ಗೆ ಕಾಳಜಿ ಇಲ್ಲ ಅಂದ್ಕೊಂಡರೆ? ಹೀಗೆ, ಬೇರೆಯವರ ಭಯಕ್ಕೆ ಅಪ್ಪ–ಮಗನ ನಡುವೆ ವಾಗ್ವಾದ. ಸುಮಾರು ನಿದರ್ಶನಗಳಲ್ಲಿ, ಮಗನ ಕನಸು ನಿರ್ನಾಮ. ಅದರಿಂದ ಅಪ್ಪ ಮಗನ ನಡುವೆ ಪ್ರೀತಿ–ವಿಶ್ವಾಸದ ಸೇತುವೆ ಕುಸಿಯುವುದು.

ಹೆಂಡತಿಯನ್ನು ಪ್ರೀತಿಯಿಂದ ಮಾತನಾಡಿಸಬೇಕು, ತನ್ನ ಪ್ರೇಮವನ್ನು ಎಲ್ಲರ ಮುಂದೆ ತೋರ್ಪಡಿಸಬೇಕೆಂಬ ಬಯಕೆ ಗಂಡನಿಗೆ; ಹೆಂಡತಿಗೆ ಇಷ್ಟ ಆಗೋ ಕೆಲಸಗಳನ್ನು ಮಾಡಬೇಕೆಂಬ ಇಚ್ಛೆ. ಹೆಂಡತಿಗೂ, ಗಂಡ ತನ್ನ ಪ್ರೀತಿಯನ್ನು ಎಲ್ಲರ ಮುಂದೆ ವ್ಯಕ್ತಪಡಿಸಲಿ ಅನ್ನೋ ಆಸೆ. ಗಂಡನಿಗೆ ನೋಡಿದೋರು ಏನಂದುಕೊಳ್ಳುತ್ತಾರೆ ಅನ್ನೋ ಭಯ. ಅಮ್ಮಾವರ ಗಂಡ ಅಂದು ಬಿಟ್ರೆ? ಹೆಂಡತಿ ಹೇಳಿದ ಹಾಗೆ ಕುಣೀತಾನೆ ಅನ್ಕೊಂಡರೆ? ಈ ಭಯ ಗಂಡ ಹೆಂಡಿರ ಸಂಬಂಧವನ್ನು ವೃದ್ಧಿಸುವ ಅವಕಾಶವನ್ನು ಇಲ್ಲವಾಗಿಸಬಹುದು.

ಹೀಗೆಯೇ ಅಲ್ಲವಾ ನಮ್ಮ ಬದುಕು? ನೋಡಿದೋರು ಏನ್ ಅನ್ಕೊಂಡು ಬಿಡ್ತಾರೆ ಅನ್ನೋ ಭಯದಲ್ಲೇ ನಮ್ಮ ಎಷ್ಟೋ ಬೇಕುಗಳನ್ನು ಬಿಡ್ತೀವಿ. ಎಷ್ಟೋ ಬೇಡಗಳನ್ನು ಮಾಡ್ತೀವಿ. ಈ 'ನೋಡಿದೋರೇನಂತಾರೆ?' ಭಯವನ್ನು ಬಿಟ್ಟು ಬದುಕಿದ್ರೆ, ನಮ್ಮ ಬದುಕು ಹೇಗಿರುತ್ತೆ? ಯೋಚಿಸಿ ನೋಡಿ.

ಅಂದಹಾಗೆ, 'ನೋಡಿದವರು ಏನಂತಾರೆ' ಹೆಸರಿನ ಕನ್ನಡ ಸಿನಿಮಾ ಕೂಡ ಇದೆ. ಆ ಸಿನಿಮಾದ್ದೂ ಕೂಡ ಇದೇ ಕಥೆ!

ಪ್ರತಿಕ್ರಿಯಿಸಿ: feedback@sudha.co.in